ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 311(244)

ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ಸಚಿವರು : ಜಲ ಸಂಪನ್ಮೂಲ ಸಚಿವರು

ಉತ್ತರಿಸುವ ದಿನಾಂಕ : 10-12-2020

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ನೀರಿನ ಅತಿ ಹೆಚ್ಚು ಬಳಕೆಯಿಂದ ಹಾಗೂ ರಾಸಾಯನಿಕ ಗೊಬ್ಬರದ ಅಸಮತೋಲನ ಉಪಯೋಗದಿಂದ ಭೂಮಿಯು ಸವಳು ಜಮೀನಾಗಿ ಪರಿವರ್ತನೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ) | ಬೆಳಗಾವಿ ಜಿಲ್ಲೆಯಲ್ಲಿ ಕಳೆದ 5 ವರ್ಷಗಳ ಅವಧಿಯಲ್ಲಿ ಎಷ್ಟು ಹೆಕ್ಟೇರ್ ಜಮೀನು ಸವಳು ಭೂಮಿಯಾಗಿ ಪರಿವರ್ತನೆಗೊಂಡಿದೆ; | 2014-15ನೇ ಸಾಲಿನಲ್ಲಿ ಕೈಗೊಂಡ ಭೂಮಿಯ ಸರ್ವೇ ಪ್ರಕಾರ ಬೆಳಗಾವಿ ಜಿಲ್ಲೆಯಲ್ಲಿ 35017 ಹೆಕ್ಟೇರ್ ಜಮೀನು ಸವಳು ಭೂಮಿಯಾಗಿರುವುದನ್ನು ಗುರುತಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಅಥಣಿ ತಾಲ್ಲೂಕಿನ ಸುಮಾರು 11606 ಹೆಕ್ಟೇರ್ ಹಾಗೂ ಕಾಗವಾಡ ತಾಲ್ಲೂಕಿನ 8146 ಹೆಕ್ಟೇರ್ ಪ್ರದೇಶದಲ್ಲಿ ಸವಳು-ಜವಳು ಭೂಮಿಯ ಸರ್ವೇ ಕಾರ್ಯವನ್ನು ಕೈಗೊಳ್ಳಲಾಗಿದೆ. |
| ಇ) | ಈ ಸವಳು ಭೂಮಿಯನ್ನು ಕೃಷಿ ಉಪಯೋಗಕ್ಕಾಗಿ ಪರಿವರ್ತನೆಗೊಳಿಸಲು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ ಹಾಗೂ ಇದರ ರೂಪುರೇಷೆಗಳೇನು; (ವಿವರವಾದ ಮಾಹಿತಿ ಒದಗಿಸುವುದು) | ಮೇಲ್ಕಂಡ ಬಾಧಿತ ಪ್ರದೇಶದ ಪೈಕಿ ಮಾರ್ಚ್-2020ರ ವರೆಗೆ 18808.47 ಹೆಕ್ಟೇರ್ ಜಮೀನಿನಲ್ಲಿ ಸವಳು-ಜವಳು ಭೂಮಿಯನ್ನು ಕೃಷಿ ಉಪಯೋಗಕ್ಕಾಗಿ ಪರಿವರ್ತನೆಗೊಳಿಸಲಾಗಿದೆ. ಭೂ ಮನರ್ ಸುಧಾರಣೆ ಪ್ರಥಮ ಹಂತದಲ್ಲಿ ಮುಚ್ಚಿಹೋಗಿರುವ ಸ್ವಾಭಾವಿಕ ನಾಲೆಗಳನ್ನು ಮುಂಜಾಗ್ರತಾ ಕ್ರಮವಾಗಿ ದುರಸ್ಥಿ ಪಡಿಸಿ ಸರಾಗವಾಗಿ ನೀರು ಹರಿಯುವಂತೆ ಮಾಡುವುದು, ಬಸಿಗಾಲುವೆ ನಿರ್ಮಿಸಿ ನೀರಿನ ಬಸಿಯುವಿಕೆಯು ಪರಿಣಾಮಕಾರಿಯಾಗುವಂತೆ ಮಾಡುವುದು, ನೀರಿನ ಸರಾಗ ಹರಿಯುವಿಕೆಗೆ ತೊಂದರೆ ಇರುವ ಭೌಗೋಳಿಕ ಪ್ರದೇಶ ಹಾಗೂ ಮಣ್ಣಿನ ರಚನೆ ಆಧರಿಸಿ ಅಂತರ್ಗತ ಬಸಿಗಾಲುವೆಗಳನ್ನು ನಿರ್ಮಿಸುವುದು, ಇವುಗಳು ಸವಳು-ಜವಳು ಭೂಮಿಯನ್ನು ಸುಧಾರಿಸಲು ಇರುವ ಕ್ರಮಗಳಾಗಿದ್ದು, ಹೀಗೆ ಬಸಿಗಾಲುವೆ ಹಾಗೂ ಅಂತರ್ಗತ ಬಸಿಗಾಲುವೆ ನಿರ್ಮಾಣದ ಮೂಲಕ ಬಾಧಿತ ಪ್ರದೇಶವನ್ನು ಸುಧಾರಣೆ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ. |

ಕಡತ ಸಂಖ್ಯೆ:ಜಸಂಇ 73 ಕಾಡಾ 2020

(ರಮೇಶ್ ಎಲ್. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು